## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 551 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 14.08.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2023, ಮೇ ತಿಂಗಳಿನಿಂದ ಇಲ್ಲಿಯವರೆಗೆ ಸರ್ಕಾರವು ಯಾವ ಯಾವ ಸಮಾವೇಶಗಳನ್ನು ನಡೆಸಿದೆ; | ಅನುಬಂಧ-01ರಲ್ಲಿ ವಿವರಗಳನ್ನು ಒದಗಿಸಲಾಗಿದೆ. |
| (ಆ) | ಸರ್ಕಾರವು ಸಾಧನಾ ಸಮಾವೇಶ, ಫಲಾನುಭವಿಗಳ ಸಮಾವೇಶ, ಇತ್ಯಾದಿ ಹೆಸರಿನಲ್ಲಿ ಮಾಡುವ ಸಮಾವೇಶಗಳಿಗೆ 2023, ಮೇ ತಿಂಗಳಿನಿಂದ ಜುಲೈ, 2025 ತಿಂಗಳವರೆಗೆ ಎಷ್ಟು ಮೊತ್ತವನ್ನು ಖರ್ಚು ಮಾಡಿದೆ; | ಅನುಬಂಧ-02 ರಲ್ಲಿ ವಿವರಗಳನ್ನು ಒದಗಿಸಲಾಗಿದೆ. |
| (ಇ) | ಸದರಿ ಸಮಾವೇಶಗಳನ್ನು ಏರ್ಪಡಿಸಲು ಅನುಮತಿ ಪಡೆಯಲಾಗಿದೆಯೇ; ಯಾವ ಕಂಪನಿಯವರಿಗೆ ಟೆಂಡರ್ ನೀಡಲಾಗಿದೆ; (ಪ್ರತಿಯೊಂದು ಸಮಾವೇಶಗಳ ಅನುಸಾರ ಖರ್ಚಾದ ಮೊತ್ತದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | |
| (ಈ) | ಈ ಸಮಾವೇಶಗಳ ಮೂಲ ಉದ್ದೇಶವೇನು. | ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸಲು ಹಾಗೂ ತಿಳುವಳಿಕೆ ನೀಡುವುದು ಸಮಾವೇಶದ ಮುಖ್ಯ ಉದ್ದೇಶವಾಗಿರುತ್ತದೆ. |

**ಸಂ: ಕಂಇ 118 ಎಮ್ಎಸ್‌ಟಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಏಪ್ರಿಲ್ 1990ಕ್ಕಿಂತ ಮುನ್ನ ಅನಧಿಕೃತ ಸಾಗುವಳಿ ಮಾಡಿದವರಿಗೂ ಅರ್ಜಿ ಸಲ್ಲಿಸಲು 3 ತಿಂಗಳ ಕಾಲಾವಕಾಶ ನೀಡಲಾಯಿತು.

- ಮುಂದುವರೆದು, 2018ರ ಅಧಿನಿಯಮ ಸಂಖ್ಯೆ 11ರ ಮೂಲಕ ಈ ಮೇಲಿನಂತೆ ಕೋಷ್ಟಕ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ದಿನಾಂಕ: 17.03.2018 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

| ಕ್ರಮ ಸಂಖ್ಯೆ | ಸ್ಥಳಗಳು | ಅಂತರಗಳು |
|---|---|---|
| (1) | (2) | (3) |
| 1 | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ 1976ರ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 18 ಕಿ.ಮೀ |
| 2 | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ 1976ರ ಉಪಬಂದಗಳ ಅಡಿಯಲ್ಲಿ ಅನುಕ್ರಮವಾಗಿ ಬರುವ ಬೆಳಗಾವಿ, ಕಲಬುರ್ಗಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ 1976ರ ಉಪಬಂಧಗಳ ಅಡಿಯಲ್ಲಿ ಬರುವ ಇತರ ನಗರ ಪಾಲಿಕೆಗಳು | 10 ಕಿ.ಮೀ |
| 3 | ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಉಪಬಂಧಗಳ ಅಡಿಯಲ್ಲಿ ಬರುವ ಎಲ್ಲಾ ನಗರ ಪೌರಸಭೆಗಳು (CMC) | 5 ಕಿ.ಮೀ |
| 4 | ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಪೌರಸಭೆಗಳು (TMC) ಮತ್ತು ಪಟ್ಟಣ ಪಂಚಾಯತ್ ಗಳು | 3 ಕಿ.ಮೀ |

- ಅದರಂತೆ ಪ್ರಸ್ತುತ ಕರ್ನಾಟಕ ಭೂಕಂದಾಯ ಕಾಯ್ದೆ -1964ರ ಕಲಂ 94-ಎ, 94-ಬಿ ರಡಿ ಕರ್ನಾಟಕ ಪೌರಸಭೆಗಳ ಅಧಿನಿಯಮ -1964ರ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಪೌರಸಭೆಗಳು (TMC) ಮತ್ತು ಪಟ್ಟಣ ಪಂಚಾಯತ್ ಗಳ 3 ಕಿ.ಮೀ ವ್ಯಾಪ್ತಿಯಲ್ಲಿನ ಅಂತರದೊಳಗೆ ಯಾವುದೇ ಭೂಮಿಯನ್ನು ಮಂಜೂರು ಮಾಡಲು ಕಾಯ್ದೆಯಡಿ ಅವಕಾಶವಿರುವುದಿಲ್ಲ.

- ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡಿದ್ದ ಕಾಲಕ್ಕೆ ಇದ್ದ ನಿಯಮಗಳಂತೆ ಮಂಜೂರು ಮಾಡಲು ಯಾವುದೇ ಅಡ್ಡಿ ಇರುವುದಿಲ್ಲ.

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ – 1

| ಕ್ರ. ಸಂ | ಜಿಲ್ಲೆ | ಉತ್ತರ |
|---|---|---|
| 1 | **ಬೆಂಗಳೂರು ನಗರ** | 2023 ಮೇ ತಿಂಗಳನಿಂದ ಇಲ್ಲಿಯವರೆಗೆ ದಿನಾಂಕ:29-09-2023 ರಂದು ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಆನೇಕಲ್ ತಾಲ್ಲೂಕಿನಲ್ಲಿ ಸರ್ಕಾರದ ಮಹತ್ವ ಯೋಜನೆಯ ಜನಸ್ಪಂದನಾ ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇದನ್ನು ಹೊರತುಪಡಿಸಿ ಜಿಲ್ಲಾ ಆಡಳಿತ ವತಿಯಿಂದ ಯಾವುದೇ ಸಮಾವೇಶ ಕಾರ್ಯಕ್ರಮ ಹಮ್ಮಿಕೊಂಡಿರುವುದಿಲ್ಲ. |
| 2 | **ಬೆಂಗಳೂರು ಗ್ರಾಮಾಂತರ** | ಮಾನ್ಯ ಮುಖ್ಯಮಂತ್ರಿ ಯವರ ಅಧ್ಯಕ್ಷತೆಯಲ್ಲಿ ದಿನಾಂಕ: 04/03/2024 ರಂದು ನೆಲಮಂಗಲ, ದಿನಾಂಕ: 10/03/2024 ರಂದು ಹೊಸಕೋಟೆ ಮತ್ತು ದಿನಾಂಕ: 11/03/2024 ರಂದು ದೇವನಹಳ್ಳಿ ತಾಲ್ಲೂಕಿನಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 27/04/2024 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಜಿಲ್ಲಾಮಟ್ಟದ ಸಾಧನ ಸಮಾವೇಶ ನಡೆದಿರುತ್ತದೆ. |
| 3 | **ಚಿಕ್ಕಬಳ್ಳಾಪುರ** | ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ. ದಿನಾಂಕ: 13/03/2024 ರಂದು ಚಿಂತಾಮಣಿ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಹಾಗೂ ದಿನಾಂಕ: 12/03/2024 ರಂದು ಗೌರಿಬಿದನೂರು ತಾಲ್ಲೂಕಿನಲ್ಲಿ ತಾಲೂಕು ಮಟ್ಟದ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ. |
| 4 | **ಚಿತ್ರದುರ್ಗ** | ಜಿಲ್ಲಾ/ತಾಲ್ಲೂಕು/ಹೋಬಳಿ ಮಟ್ಟದಲ್ಲಿ ಗ್ಯಾರಂಟಿ ಯೋಜನೆ ಸಮಾವೇಶ ನಡೆದಿರುತ್ತದೆ. |
| 5 | **ದಾವಣಗೆರೆ** | ಗ್ಯಾರಂಟಿ ಯೋಜನೆಗಳ ಸಂಬಂಧ ಅನುಷ್ಠಾನ ಕುರಿತಂತೆ ಮಾನ್ಯ ಉಸ್ತುವಾರಿ ಸಚಿವರ ಸಮಕ್ಷಮದಲ್ಲಿ ಜಿಲ್ಲಾ/ತಾಲ್ಲೂಕು/ಹೋಬಳಿ ಮಟ್ಟದಲ್ಲಿ ಕಾರ್ಯಕ್ರಮ ನಡೆಸಲಾಗಿರುತ್ತದೆ. |
| 6 | **ಕೋಲಾರ** | ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶವು ಮಾರ್ಚ್ 2024 ರಲ್ಲಿ ನಡೆದಿರುತ್ತದೆ. |
| 7 | **ಬೆಂಗಳೂರು ದಕ್ಷಿಣ** | • 2024 ನೇ ಸಾಲಿನ ದಿನಾಂಕ: 29-02-2024 ರಂದು ಮಾಗಡಿ ತಾಲ್ಲೂಕಿನಲ್ಲಿ, ದಿನಾಂಕ 02-03-2024 ರಂದು ಚನ್ನಪಟ್ಟಣ ತಾಲ್ಲೂಕಿನಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಫಲಾನುಭವಿಗಳ ಜಿಲ್ಲಾ ಮಟ್ಟದ ಸಮಾವೇಶನಡೆಸಲಾಗಿರುತ್ತದೆ..<br>• 2024 ನೇಸಾಲಿನಲ್ಲಿದಿನಾಂಕ: 24-06-2024, 26-06-2024, 01-07-2024, 02-07-2024 ಮತ್ತು 03-07-2024 ರಂದು ಚನ್ನಪಟ್ಟಣ ತಾಲ್ಲೂಕಿನ ಎಲ್ಲಾ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 9 ಸ್ಥಳಗಳಲ್ಲಿ"ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ"ಎಂಬ ಶೀರ್ಷಿಕೆ ಅಡಿ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಲಾಗಿರುತ್ತದೆ.<br>• ದಿನಾಂಕ: 12-01-2025 ರಂದು" ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ" ಎಂಬ ಶೀರ್ಷಿಕೆ ಅಡಿ ದೊಡ್ಡಾಲಹಳ್ಳಿಗ್ರಾಮ, ಕನಕಪುರ ತಾಲ್ಲೂಕು ಇಲ್ಲಿ ರೀಸರ್ವೆ ಯೋಜನೆಯಡಿ ಆಧುನಿಕ ತಂತ್ರಜ್ಞಾನ ಬಳಸಿ ಸೃಜಿಸಲಾದ ಕರಡು ಆರ್.ಟಿ.ಸಿ ದಾಖಲೆಗಳ ವಿತರಣೆ ಕಾರ್ಯಕ್ರಮ. |
| 8 | **ಶಿವಮೊಗ್ಗ** | 1) 2024 ನೇ ಸಾಲಿನಲ್ಲಿ ಗ್ಯಾರಂಟಿಗಳಲ್ಲಿನ ನಡೆಸಲಾಗಿರುತ್ತದೆ ದಿನಾಂಕ: 12.01.2024 ರಂದು ಸರ್ಕಾರದ ಐದು ಯುವನಿಧಿ ಯೋಜನೆಯ ಜಿಲ್ಲಾ ಮಟ್ಟದ ಸಮಾವೇಶ ನಡೆಸಲಾಗಿರುತ್ತದೆ.<br>2) 2024 ನೇ ಸಾಲಿನಲ್ಲಿ ಗ್ಯಾರಂಟಿ ಯೋಜನೆಯ ನಡೆಸಲಾಗಿರುತ್ತದೆ ದಿನಾಂಕ: 24.02.2024 ರಂದು ಸರ್ಕಾರದ ಐದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಾವೇಶ ನಡೆಸಲಾಗಿರುತ್ತದೆ. |
| 9 | **ತುಮಕೂರು** | ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಗ್ಯಾರಂಟಿ ಯೋಜನೆ ಸಮಾವೇಶ ಮತ್ತು ವಿಜಯನಗರ ಜಿಲ್ಲೆಯಲ್ಲಿ ರಾಜ್ಯಮಟ್ಟದ ಸಾಧನಾ ಸಮಾವೇಶ ನಡೆದಿರುತ್ತದೆ. |

| | | |
|---|---|---|
| 10 | **ಮೈಸೂರು** | ಮೇ - 2023 ರಿಂದ 19.8.2025 ರ ರವರೆಗೆ ಮೈಸೂರು ಜಿಲ್ಲೆಯಲ್ಲಿನ 06 ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸಮಾವೇಶಗಳನ್ನು ನಡೆಸಲಾಗಿದೆ. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಸಮಾವೇಶ ಕಾರ್ಯಕ್ರಮವನ್ನು ನಡೆಸಲಾಗಿದೆ. |
| 11 | **ಚಾಮರಾಜನಗರ** | ಚಾಮರಾಜನಗರ ಜಿಲ್ಲೆಯಲ್ಲಿ ದಿನಾಂಕ:-12/03/2025 ರಂದು ಸರ್ಕಾರದ ಐದು ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶವನ್ನು ನಡೆಸಲಾಗಿರುತ್ತದೆ. |
| 12 | **ಚಿಕ್ಕಮಗಳೂರು** | ಚಿಕ್ಕಮಗಳೂರು ಜಿಲ್ಲೆಯಲ್ಲಿ ದಿನಾಂಕ: 03-03-2024 ರಂದು ಜಿಲ್ಲಾ ಮಟ್ಟದ ಗ್ಯಾರೆಂಟಿ ಯೋಜನೆಗಳ ಸಮಾವೇಶವನ್ನು ನಡೆಸಿದೆ. |
| 13 | **ದಕ್ಷಿಣ ಕನ್ನಡ** | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ/ ತಾಲೂಕು ಮಟ್ಟದಲ್ಲಿ ಈ ಕೆಳಗಿನಂತೆ ಗ್ಯಾರಂಟಿ ಸಮಾವೇಶಗಳನ್ನು ನಡೆಸಲಾಗಿರುತ್ತದೆ. |

| ಕ್ರ.ಸಂ | ತಾಲೂಕು | ದಿನಾಂಕ |
|---|---|---|
| 1 | **ಮಂಗಳೂರು** | 07-03-2024 |
| 2 | **ಬಂಟ್ವಾಳ** | 09-03-2024 |
| 3 | **ಬೆಳ್ತಂಗಡಿ** | 09-03-2024 |
| 4 | **ಪುತ್ತೂರು** | 07-03-2024 |
| 5 | **ಸುಳ್ಯ** | 10-03-2024 |
| 6 | **ಮೂಡಬಿದ್ರೆ** | 10-03-2024 |
| 7 | **ಮುಲ್ಕಿ** | 07-03-2024 |
| 8 | **ಕಡಬ** | 10-03-2024 |
| 9 | **ಉಳ್ಳಾಲ** | 09-03-2024 |

| | | |
|---|---|---|
| 14 | **ಹಾಸನ** | ಹಾಸನ ಜಿಲ್ಲೆಯಲ್ಲಿ ಸರ್ಕಾರದ 2 ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶಗಳನ್ನು ನಡೆಸಲಾಗಿರುತ್ತದೆ. |
| 15 | **ಮಂಡ್ಯ** | ಮಂಡ್ಯ ಜಿಲ್ಲೆಯಲ್ಲಿ ಮೇ 2023 ರಿಂದ ಇಲ್ಲಿಯವರೆಗೆ ಮಳವಳ್ಳಿ ಮತ್ತು ಮಂಡ್ಯ ತಾಲ್ಲೂಕಿನಲ್ಲಿ ಫಲಾನುಭವಿಗಳ ಸಮಾವೇಶವನ್ನು ನಡೆಸಲಾಗಿದೆ. |
| 16 | **ಉಡುಪಿ** | ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಉಡುಪಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲೂಕು ಮಟ್ಟದಲ್ಲಿ ಕುಂದಾಪುರ ತಾಲೂಕಿನಲ್ಲಿ ಕುಂದಾಪುರ ಹಾಗೂ ವಂಡ್ಸೆ ಹೋಬಳಿ, ಕಾರ್ಕಳ ತಾಲೂಕಿನಲ್ಲಿ ಕಾರ್ಕಳ ಮತ್ತು ಅಜೆಕಾರು ಬೈಂದೂರು ತಾಲೂಕು ಹಾಗೂ ಬ್ರಹ್ಮಾವರ ತಾಲೂಕಿನಲ್ಲಿ ಬ್ರಹ್ಮಾವರ ಮತ್ತು ಕೋಟ ಹೋಬಳಿಯಲ್ಲಿ ಕಾಪು ಹಾಗೂ ಹೆಬ್ರಿ ತಾಲೂಕಿನಲ್ಲಿ ತಾಲೂಕು ಮಟ್ಟದ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ. |
| 17 | **ಕಲಬುರಗಿ** | ಕಲಬುರಗಿ ಜಿಲ್ಲೆಯಲ್ಲಿ ಗ್ಯಾರಂಟಿ ಸಮಾವೇಶಗಳನ್ನು ನಡೆಸಲಾಗಿರುತ್ತದೆ. |
| 18 | **ಬಳ್ಳಾರಿ** | ಪಂಚ ಗ್ಯಾರೆಂಟಿ ಸಮಾವೇಶ ಹಾಗೂ ಸಾಧನಾ ಸಮಾವೇಶ ನಡೆಸಲಾಗಿರುತ್ತದೆ. |
| 19 | **ಬೀದರ್** | ಗ್ಯಾರಂಟಿ ಯೋಜನೆಯ ಸಮಾವೇಶ ಹಾಗೂ ದಿನಾಂಕ: 20-05-2025 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ಆಯೋಜಿಸಿದ್ದ ವಿವಿಧ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ಕುರಿತು ಸಮರ್ಪಣಾ ಸಂಕಲ್ಪ-2025 ಕಾರ್ಯಕ್ರಮ ವಿಜಯನಗರ ಜಿಲ್ಲಾಡಾಳಿತದಿಂದ ನಡೆಸಲಾಗಿರುತ್ತದೆ. |
| 20 | **ಕೊಪ್ಪಳ** | ಕೊಪ್ಪಳ ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ದಿನಾಂಕ: 02.03.2024 ರಂದು ನಡೆಸಲಾಗಿರುತ್ತದೆ. |
| 21 | **ರಾಯಚೂರು** | 2023ನೇ ತಿಂಗಳಿನಿಂದ ಇಲ್ಲಿಯವರೆಗೆ<br>1. ಪಂಚ ಗ್ಯಾರಂಟಿ ಸಮಾವೇಶ.<br>2. ಗೋಕಾಕ್ ಚಳುವಳಿ ಹಿನ್ನೋಟ ಮುನ್ನೋಟ.<br>3. ಬುಡಕಟ್ಟು ಉತ್ಸವ ಕಾರ್ಯಕ್ರಮಗಳು ಸರ್ಕಾರದಿಂದ ನಡೆದಿರುತ್ತವೆ. |
| 22 | **ವಿಜಯನಗರ** | 2023 ಮೇ ತಿಂಗಳಿನಿಂದ ಇಲ್ಲಿಯವರೆಗೆ 01 ಸಮರ್ಪಣೆ ಸಂಕಲ್ಪ ಸಮಾವೇಶ ಸರ್ಕಾರದಿಂದ ನಡೆಸಲಾಗಿದೆ ಹಾಗೂ ಗ್ಯಾರಂಟಿ ಯೋಜನೆ ಸಮಾವೇಶ ನಡೆಸಲಾಗಿರುತ್ತದೆ. |

| | | |
|---|---|---|
| 23 | **ಬೆಳಗಾವಿ** | ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಸಮಾವೇಶಗಳನ್ನು ನಡೆಸಲಾಗಿರುತ್ತದೆ. |
| 24 | **ಬಾಗಲಕೋಟೆ** | ಬಾಗಲಕೋಟೆ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಐದು ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ಬಾಗಲಕೋಟೆ, ಬಾದಾಮಿ, ಬೀಳಗಿ ತಾಲ್ಲೂಕುಗಳಲ್ಲಿ ಆಯೋಜಿಸಲಾಗಿರುತ್ತದೆ. |
| 25 | **ವಿಜಯಪುರ** | ವಿಜಯಪುರ ಜಿಲ್ಲೆಯಲ್ಲಿ ಸನ್ 2023-24 ನೇ ಸಾಲಿನಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶ ಕಾರ್ಯಕ್ರಮ ನಡೆದಿರುತ್ತದೆ. |
| 26 | **ಧಾರವಾಡ** | ಸರ್ಕಾರದ ಆದೇಶ ಸಂ: ಸಿಆಸುಇ ಆಸು 03 ಇಸಪ 2024, ದಿ: 23.01.2024ರನ್ವಯ ಧಾರವಾಡ ಜಿಲ್ಲೆಯಲ್ಲಿ ಗ್ಯಾರಂಟಿ ಸಮಾವೇಶವನ್ನು ಜರುಗಿಸಿದ್ದು ಇರುತ್ತದೆ. |
| 27 | **ಗದಗ** | ಸರ್ಕಾರದ ನಿರ್ದೇಶನದಂತೆ ಗದಗ ಜಿಲ್ಲೆಯ ಗದಗ, ಮುಂಡರಗಿ, ರೋಣ ಮತ್ತು ಲಕ್ಷ್ಮೇಶ್ವರ ತಾಲ್ಲೂಕುಗಳಲ್ಲಿ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಗ್ಯಾರಂಟಿ ಯೋಜನೆಯ ಸಮಾವೇಶಗಳನ್ನು ಆಯೋಜಿಸಲಾಗಿರುತ್ತದೆ. |
| 28 | **ಹಾವೇರಿ** | ಸರ್ಕಾರದ ನಿರ್ದೇಶನದಂತೆ ಹಾವೇರಿ ಜಿಲ್ಲೆಯಲ್ಲಿ ಒಟ್ಟು ಸಂಖ್ಯೆ- 19 ತಾಲೂಕು/ ಹೋಬಳಿಗಳ ಮಟ್ಟದ ಗ್ಯಾರಂಟಿ ಯೋಜನೆಗಳ ಸಮಾವೇಶಗಳನ್ನು ಆಯೋಜಿಸಲಾಗಿರುತ್ತದೆ. |
| 29 | **ಉತ್ತರ ಕನ್ನಡ** | ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಐದು ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ದಿ:16.03.2024 ರಂದು ರವೀಂದ್ರನಾಥ ಠಾಗೋರ ಕಡಲ ತೀರ, ಕಾರವಾರದಲ್ಲಿ ಆಯೋಜಿಸಿದ್ದು ಇರುತ್ತದೆ. |

*******

# ಅನುಬಂಧ – 2

| ಕ್ರ. ಸಂ | ಜಿಲ್ಲೆ | ಉತ್ತರ |
|---|---|---|
| 1 | **ಬೆಂಗಳೂರು ನಗರ** | ಜಿಲ್ಲಾ ಆಡಳಿತ ವತಿಯಿಂದ ಸಮಾವೇಶ ಹಮ್ಮಿಕೊಂಡಿರುವುದಿಲ್ಲವಾದ್ದರಿಂದ ಯಾವುದೇ ಕಂಪನಿಗಳಿಗೆ ಟೆಂಡರ್ ನೀಡಿರುವುದಿಲ್ಲ. |
| 2 | **ಬೆಂಗಳೂರು ಗ್ರಾಮಾಂತರ** | • ಸರ್ಕಾರದ ಸುತ್ತೋಲೆ ಸಂಖ್ಯೆ: ಮುಕಾ 95 2023, ಬೆಂಗಳೂರು, ದಿನಾಂಕ:10/02/2023 ಹಾಗೂ ಸರ್ಕಾರದ ಆದೇಶಸಂಖ್ಯೆ: ಸಿಆಸುಇ ಆಸು 03 ಇಸವ 2024, ಬೆಂಗಳೂರು, ದಿನಾಂಕ: 23/01/2024 ರಂತೆ ಸರ್ಕಾರದಿಂದ ಅನುಮತಿ ಪಡೆಯಲಾಗಿದೆ.<br><br>• ದಿನಾಂಕ: 27/03/2023 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಮಟ್ಟದ ಫಲಾನುಭವಿಗಳ ಸಮ್ಮೇಳನ ಕಾರ್ಯಕ್ರಮಕ್ಕೆ ಫಲಾನುಭವಿಗಳನ್ನು ಕರೆತಂದಿರುವ ಬಾಬು, ಕ.ರಾ.ರ.ಸಾ.ನಿ ರವರಿಗೆ ರೂ.**48,97,873/-**<br><br>• ದಿನಾಂಕ:18/03/2023 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೇವನಹಳ್ಳಿ ತಾಲ್ಲೂಕಿನಲ್ಲಿ ನಡೆಯಬೇಕಿದ್ದ ಜಿಲ್ಲಾ ಫಲಾನುಭವಿಗಳ ಸಮ್ಮೇಳನ ಕಾರ್ಯಕ್ರಮಕ್ಕೆ ಶ್ರೀ ಲಕ್ಷ್ಮೀ ವೆಂಕಟೇಶ್ವರ ಟೆಂಟ್ಹೌಸ್‌ಗೆ ನೀಡಿರುವ ಬಾಬ್ತು ರೂ.**15,00,000/-**<br><br>• ದಿನಾಂಕ: 04/03/2024 ರಂದು ನೆಲಮಂಗಲ ತಾಲ್ಲೂಕಿನಲ್ಲಿ ನಡೆದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶಕ್ಕೆ KSMC & A (Karnataka State Marketing Communication & Advertising Limited ಸಂಸ್ಥೆಗೆ ನೀಡಿರುವ ಬಾಬ್ತು ರೂ.**71,29,725/-**<br><br>• ದಿನಾಂಕ: 04/03/2024 ರಂದು ನೆಲಮಂಗಲ ತಾಲ್ಲೂಕಿನಲ್ಲಿ ನಡೆದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶಕ್ಕೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC)ಗೆ ನೀಡಿರುವ ಬಾಬು ರೂ.**28,70,275/-**<br><br>• ದಿನಾಂಕ: 10/03/2024 ರಂದು ಹೊಸಕೋಟೆ ತಾಲ್ಲೂಕಿನಲ್ಲಿ ನಡೆದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶಕ್ಕೆ KSMC & A (Karnataka State Marketing Communication & Advertising Limited .ಸಂಸ್ಥೆಗೆ ನೀಡಿರುವ ಬಾಬ್ತು ರೂ.**1,06,24,945/-**<br><br>• ದಿನಾಂಕ: 10/03/2024 ರಂದು ಹೊಸಕೋಟೆ ತಾಲ್ಲೂಕಿನಲ್ಲಿ ನಡೆದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶಕ್ಕೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC)ಗೆ ನೀಡಿರುವ ಬಾಬ್ತು ರೂ.**33,05,220/-**<br><br>• ದಿನಾಂಕ: 11/03/2024 ರಂದು ದೇವನಹಳ್ಳಿ ತಾಲ್ಲೂಕಿನಲ್ಲಿ ನಡೆದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶಕ್ಕೆ, KSMC & A (Karnataka State Marketing Communication & Advertising Limited ಸಂಸ್ಥೆಗೆ ನೀಡಿರುವ ಬಾಬ್ತು ರೂ. **1,40,00,001/-**<br><br>• ದಿನಾಂಕ: 11/03/2024 ರಂದು ದೇವನಹಳ್ಳಿ ತಾಲ್ಲೂಕಿನಲ್ಲಿ ನಡೆದ ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶಕ್ಕೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC)ಗೆ ನೀಡಿರುವ ಬಾಬ್ತು ರೂ.**48,00,000/-** |

<table>
<tr><td>3</td><td>ಚಿಕ್ಕಬಳ್ಳಾಪುರ</td><td>

• ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ/34/ಸಿಸಿಆರ್ ವಿ/2023 (ಇ-1184254), ಬೆಂಗಳೂರು, ದಿನಾಂಕ:04/03/2024 ರಂತೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ ಸಾರ್ವಜನಿಕರ ಮಾಹಿತಿಯನ್ನು ನೀಡಲು ಕಾರ್ಯಕ್ರಮವನ್ನು ಆಯೋಜಿಸಲು ಜಿಲ್ಲಾಧಿಕಾರಿಗಳ ಮಿಸಲೇನಿಯಸ್ ಪಿ.ಡಿ. ಖಾತೆಯಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವನ್ನು ಹೊರತುಪಡಿಸಿ ಬಳಕೆಯಾಗದೇ ಉಳಿದಿರುವ ಇತರೇ ಅನುದಾನದಿಂದ ಜಿಲ್ಲಾಧಿಕಾರಿಗಳು ಪ್ರತಿ ತಾಲ್ಲೂಕಿಗೆ ರೂ.50.00 ಲಕ್ಷ. ಜಿಲ್ಲೆಗೆ ರೂ.100.00 ಲಕ್ಷ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮಗಳಿಗೆ ರೂ.200.00 ಲಕ್ಷ ಬಳಸಿಕೊಳ್ಳಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಕೆಲವೊಂದು ಷರತ್ತುಗಳಿಗೊಳಪಟ್ಟು ಮಂಜೂರಾತಿಯನ್ನು ನೀಡಲಾಗಿರುತ್ತದೆ.<br>
• ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ, ದಿನಾಂಕ:13/03/2024 ರಂದು ಚಿಂತಾಮಣಿ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಹಾಗೂ ದಿನಾಂಕ:12/03/2024 ರಂದು ಗೌರಿಬಿದನೂರು ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶ ಕಾರ್ಯಕ್ರಮಗಳನ್ನು ಆಯೋಜಿಸಲು ಒಟ್ಟು ರೂ.1,01,95,066/-ಗಳ ಅನುದಾನವನ್ನು ಖರ್ಚು ಮಾಡಲಾಗಿರುತ್ತದೆ.
</td></tr>
<tr><td>4</td><td>ಚಿತ್ರದುರ್ಗ</td><td>
2023, ಮೇ ತಿಂಗಳಿನಿಂದ ಜುಲೈ 2025 ತಿಂಗಳವರೆಗೆ ಸರ್ಕಾರವು ಗ್ಯಾರಂಟಿ ಸಮಾವೇಶ ಮತ್ತು ರಾಜ್ಯಮಟ್ಟದ ಸಾಧನಾ ಸಮಾವೇಶ, ನಡೆಸಿದ್ದು, ಸದರಿ ಸಮಾವೇಶಗಳಿಗೆ ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತೆ ಇರುತ್ತದೆ:
<table>
<tr><th>ಸಮಾವೇಶದ ವಿವರ</th><th>ವೆಚ್ಚದ ಮೊತ್ತ (ರೂ.ಗಳಲ್ಲಿ)</th></tr>
<tr><td>ಗ್ಯಾರಂಟಿ ಯೋಜನೆಗಳ ಸಮಾವೇಶ</td><td>93,98,192/-</td></tr>
<tr><td>ವಿಜಯ ನಗರದಲ್ಲಿ ನಡೆಸಿರುವ ರಾಜ್ಯ ಮಟ್ಟದ ಸಾಧನಾ ಸಮಾವೇಶ</td><td>19,93,887/-</td></tr>
</table>
</td></tr>
<tr><td>5</td><td>ದಾವಣಗೆರೆ</td><td>
• ಗ್ಯಾರಂಟಿ ಯೋಜನೆಗಳ ಸಂಬಂಧ ಅನುಷ್ಠಾನ ಕುರಿತಂತೆ ಮಾನ್ಯ ಉಸ್ತುವಾರಿ ಸಚಿವರ ಸಮಕ್ಷಮದಲ್ಲಿ ಜಿಲ್ಲಾ/ತಾಲ್ಲೂಕು/ಹೋಬಳಿ ಮಟ್ಟದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ರೂ.99 ಲಕ್ಷಗಳು ಬಿಡುಗಡೆಯಾಗಿರುತ್ತದೆ.<br><br>
• ವಿಜಯನಗರ ಜಿಲ್ಲೆ ಹೊಸಪೇಟೆ ನಗರದಲ್ಲಿ ಆಯೋಜಿಸಲಾಗಿದ್ದ ಸಾಧನಾ ಸಮಾವೇಶಕ್ಕೆ ಕರೆದುಕೊಂಡು ಹೋಗಲು ಜಿಲ್ಲೆಗೆ ವಿವಿಧ ವೆಚ್ಚಗಳಿಗೆ ರೂ.18.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಒಟ್ಟು ರೂ.117 ಲಕ್ಷ ವೆಚ್ಚ ಭರಿಸಲಾಗಿರುತ್ತದೆ.<br><br>
• ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ನಿರ್ಮಿತಿ ಕೇಂದ್ರದ ಮೂಲಕ ವೆಚ್ಚ ಭರಿಸಲಾಗಿರುತ್ತದೆ.
</td></tr>
<tr><td>6</td><td>ಕೋಲಾರ</td><td>
ಆದೇಶ ಸಂಖ್ಯೆ: RHRCOADM/01/2024 ದಿನಾಂಕ:25.03.2024 ರ ಆದೇಶದಂತೆ ಜಿಲ್ಲಾ/ ತಾಲ್ಲೂಕು/ ಹೋಬಳಿ ಮಟ್ಟದಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ಆಯೋಜಿಸಲು ರೂ.2,53,11,153/-ಗಳನ್ನು ಬಿಡುಗಡೆ ಮಾಡಲಾಗಿದೆ ಸದರಿ ಮೊತ್ತದಲ್ಲಿ ರೂ.2,51,43,746/- ಗಳು ಸಮಾವೇಶದ ವೆಚ್ಚಗಳಿಗಾಗಿ ಖರ್ಚು ಮಾಡಲಾಗಿರುತ್ತದೆ.
</td></tr>
<tr><td>7</td><td>ಬೆಂಗಳೂರು ದಕ್ಷಿಣ</td><td>
• 2024 ನೇಸಾಲಿನ ದಿನಾಂಕ: 29-02-2024 ರಂದು ಮಾಗಡಿ ತಾಲ್ಲೂಕಿನಲ್ಲಿ ದಿನಾಂಕ 02-03-2024 ರಂದು ಚನ್ನಪಟ್ಟಣ ತಾಲ್ಲೂಕಿನಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸಲು ಫಲಾನುಭವಿಗಳ ಜಿಲ್ಲಾಮಟ್ಟದ ಸಮಾವೇಶಕ್ಕಾಗಿ ರೂ. 67,31,700/-ಗಳನ್ನು ವೆಚ್ಚ ಮಾಡಲಾಗಿರುತ್ತದೆ.
</td></tr>
</table>

<table>
<tr><td></td><td></td><td><ul><li>2024 ನೇ ಸಾಲಿನಲ್ಲಿ ದಿನಾಂಕ: 24-06-2024, 26-06-2024, 01-07-2024, 02-07-2024 ಮತ್ತು 03-07-2024 ರಂದು ಚನ್ನಪಟ್ಟಣ ತಾಲ್ಲೂಕಿನ ಎಲ್ಲಾ ಜಿಲ್ಲಾಪಂಚಾಯತ್ ವ್ಯಾಪ್ತಿಯಲ್ಲಿ 9 ಸ್ಥಳಗಳಲ್ಲಿ"ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ"ಎಂಬ ಶೀರ್ಷಿಕೆ ಅಡಿ ಜನಸ್ಪಂದನ ಕಾರ್ಯಕ್ರಮಕ್ಕೆ ಒಟ್ಟುರೂ. 4,63,16,000/- ಗಳುವೆಚ್ಚವಾಗಿರುತ್ತದೆ.</li>
<li>ದಿನಾಂಕ: 12-01-2025 ರಂದು" ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ"ಎಂಬ ಶೀರ್ಷಿಕೆ ಅಡಿ ದೊಡ್ಡಾಲಹಳ್ಳಿ ಗ್ರಾಮ, ಕನಕಪುರ ತಾಲ್ಲೂಕು ಇಲ್ಲಿ ರೀಸರ್ವೆ ಯೋಜನೆಯಡಿ ಆಧುನಿಕ ತಂತ್ರಜ್ಞಾನ ಬಳಸಿ ಸೃಜಿಸಲಾದ ಕರಡು ಆರ್.ಟಿ.ಸಿ ದಾಖಲೆಗಳ ವಿತರಣೆ ಕಾರ್ಯಕ್ರಮಕ್ಕಾಗಿ ಒಟ್ಟು ರೂ. 56,04,850/- ಗಳು ವೆಚ್ಚವಾಗಿರುತ್ತದೆ.</li>
<li>ಮೇಲ್ಕಂಡ 3 ಸಮಾವೇಶಗಳನ್ನು ಕೆ.ಆರ್.ಐ.ಡಿ.ಎಲ್,ರಾಮನಗರ ರವರಿಂದ ಅನುಷ್ಠಾನ ಗೊಳಿಸಲಾಗಿದೆ.</li></ul></td></tr>
<tr><td>8</td><td>ಶಿವಮೊಗ್ಗ</td><td><ul><li>ಶಿವಮೊಗ್ಗ ನಗರದ ಫ್ರೀಡಂ ಪಾರ್ಕ್ ನಲ್ಲಿ ಯುವನಿಧಿ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ರೂ.70,00,000/-(ಎಪ್ಪತ್ತು ಲಕ್ಷ) ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಿದ್ದು, ಬಿಡುಗಡೆಯಾದ ಮೊತ್ತದಲ್ಲಿ ರೂ.12,96,889/- ಗಳನ್ನು ಖರ್ಚು ಭರಿಸಲಾಗಿರುತ್ತದೆ. ಮಾರ್ಚ್ ಅಂತ್ಯಕ್ಕೆ ಉಳಿದ ರೂ.57.03,111/- ವ್ಯಪಗತವಾಗಿರುತ್ತದೆ.</li>
<li>ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಐದು ಗ್ಯಾರಂಟಿ ಯೋಜನೆಯ ಸಮಾವೇಶಕ್ಕೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತ ರೂ. 2,53,11,153/- ರಲ್ಲಿ ಗಳನ್ನು ಖರ್ಚು ಭರಿಸಲಾಗಿರುತ್ತದೆ. ಮಾರ್ಚ್ ಅಂತ್ಯಕ್ಕೆ ಉಳಿದ ರೂ.12,34,162/-ವ್ಯಪಗತವಾಗಿರುತ್ತದೆ.</li></ul></td></tr>
<tr><td>9</td><td>ತುಮಕೂರು</td><td>2023, ಮೇ ತಿಂಗಳಿನಿಂದ -2025 ತಿಂಗಳವರೆಗೆ ಸರ್ಕಾರವು ಗ್ಯಾರಂಟಿ ಸಮಾವೇಶ ಮತ್ತು ರಾಜ್ಯಮಟ್ಟದ ಸಾಧನಾ ಸಮಾವೇಶ ನಡೆಸಿದ್ದು, ಸದರಿ ಸಮಾವೇಶಗಳಿಗೆ ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ಸಮಾವೇಶದ ವಿವರ</th><th>ವೆಚ್ಚದ ಮೊತ್ತ (ರೂ.ಗಳಲ್ಲಿ)</th></tr>
<tr><td>ಗ್ಯಾರಂಟಿ ಯೋಜನೆಗಳ ಸಮಾವೇಶ</td><td>1,10,00,000/-</td></tr>
<tr><td>ವಿಜಯನಗರದಲ್ಲಿ ನಡೆಸಿರುವ ರಾಜ್ಯ ಮಟ್ಟದ ಸಾಧನಾ ಸಮಾವೇಶ</td><td>3,20,000/-</td></tr>
</table></td></tr>
<tr><td>10</td><td>ಮೈಸೂರು</td><td><ul><li>ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶ ಕಾರ್ಯಕ್ರಮದ ಆಯೋಜನೆಯ ವೆಚ್ಚಗಳಿಗೆ ಒಟ್ಟಾಗಿ ರೂ.2,54,45,739/- ಗಳ ವೆಚ್ಚವಾಗಿರುತ್ತದೆ.</li>
<li>ಸದರಿ ಸಮಾವೇಶ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಯೋಜನಾ ನಿರ್ದೇಶಕರು, ಮೈಸೂರು ನಿರ್ಮಿತಿ ಕೇಂದ್ರ ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.</li></ul></td></tr>
<tr><td>11</td><td>ಚಾಮರಾಜನಗರ</td><td><ul><li>ಚಾಮರಾಜನಗರ ಜಿಲ್ಲೆಯಲ್ಲಿ ಒಂದು ಸರ್ಕಾರದ ಐದು ಗ್ಯಾರಂಟಿ ಯೋಜನೆಯ ಫಲಾನುಭವಿಗಳ ಸಮಾವೇಶವನ್ನು ನಡೆಸಲಾಗಿದ್ದು ಸದರಿ ಸಮಾವೇಶಕ್ಕೆ ರೂ.1,21,80,620/- ಗಳನ್ನು ಖರ್ಚು ಮಾಡಲಾಗಿರುತ್ತದೆ.</li>
<li>ಸದರಿ ಸಮಾವೇಶಗಳನ್ನು ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಆಇ 862 ವೆಚ್ಚ 7/2024, RCCFSOADMN(EST)/128/2024 ದಿ:-25/10/2024 ರೀತ್ಯಾ 4(ಜಿ) ಅನುಮತಿ ನೀಡಲಾಗಿರುತ್ತದೆ.</li></ul></td></tr>
<tr><td>12</td><td>ಚಿಕ್ಕಮಗಳೂರು</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶಕ್ಕೆ ಒಟ್ಟು ರೂ. 1,37,25,000/- ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಗ್ಯಾರಂಟಿ ಯೋಜನೆಯ ಸಮಾವೇಶವನ್ನು ಏರ್ಪಡಿಸಲು ಕೆ.ಆರ್.ಐ.ಡಿ.ಎಲ್. ಚಿಕ್ಕಮಗಳೂರು ರವರಿಗೆ ವಹಿಸಲಾಗಿದೆ.</td></tr>
</table>

<table>
<tr><td>13</td><td>ದಕ್ಷಿಣ ಕನ್ನಡ</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ/ ತಾಲೂಕು ಮಟ್ಟದಲ್ಲಿ ನಡೆದ ಗ್ಯಾರಂಟಿ ಸಮಾವೇಶಗಳಿಗೆ ಒಟ್ಟು ರೂ.1,81,79,252.00 ಮೊತ್ತ ಖರ್ಚಾಗಿರುತ್ತದೆ.</td></tr>
<tr><td>14</td><td>ಹಾಸನ</td><td>ಸರ್ಕಾರದ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶಕ್ಕಾಗಿ ಒಟ್ಟು ರೂ 2,53,11,153/- ಮೊತ್ತ ವೆಚ್ಚವಾಗಿರುತ್ತದೆ.</td></tr>
<tr><td>15</td><td>ಮಂಡ್ಯ</td><td>ಜಿಲ್ಲೆಯಲ್ಲಿ ಮೇಲ್ಕಂಡ ಎರಡು ಫಲಾನುಭವಿಗಳ ಸಮಾವೇಶಕ್ಕೆ ರೂ.4,03,11,153/- ಕೋಟಿಗಳನ್ನು ವೆಚ್ಚ ಮಾಡಲಾಗಿದೆ.</td></tr>
<tr><td>16</td><td>ಉಡುಪಿ</td><td>ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ 7 ತಾಲೂಕುಗಳ ಪೈಕಿ 9 ಹೋಬಳಿಗಳಲ್ಲಿ ಗ್ಯಾರಂಟಿ ಯೋಜನೆಯ ಸಮಾವೇಶವನ್ನು ಯಶಸ್ವಿಯಾಗಿ ಆಯೋಜಿಸಿದ್ದು ಸರ್ಕಾರದ ಆದೇಶ ಸಂ: ಆರ್ ಹೆಚ್ ಆರ್ ಒ/ಎಡಿಎಂ/01/2024-25 ಬೆಂಗಳೂರು ದಿನಾಂಕ: 25.03.2024ರಂತೆ ಉಡುಪಿ ಜಿಲ್ಲೆಗೆ ರೂ.95,31,500/- ಅನುದಾನ ಬಿಡುಗಡೆಯಾಗಿರುತ್ತದೆ.<br>ಸದರಿ ಅನುದಾನದಲ್ಲಿ ಈ ಕೆಳಗಿನಂತೆ ವೆಚ್ಚ ಮಾಡಲಾಗಿರುತ್ತದೆ:
<table>
<tr><th>ಕ್ರ.ಸಂ</th><th>ವಿವರ</th><th>ಮೊತ್ತ</th></tr>
<tr><td>01</td><td>ಉಡುಪಿ ಜಿಲ್ಲಾ ಮಟ್ಟ</td><td>87,48,500-00</td></tr>
<tr><td>02</td><td>ತಾಲೂಕು ಮಟ್ಟ</td><td>7,83,000-00</td></tr>
<tr><td>ಒಟ್ಟು</td><td></td><td>95,31,500-00</td></tr>
</table></td></tr>
<tr><td>17</td><td>ಕಲಬುರಗಿ</td><td>ಸಾದನಾ ಸಮಾವೇಶಗಳನ್ನು ಏರ್ಪಡಿಸಲು ರೂ. 2,53,11,153/-ಗಳನ್ನು ನಿರ್ಮಿತಿ ಕೇಂದ್ರ, ಕಲಬುರಗಿ ರವರ ಮೂಲಕ ವೆಚ್ಚ ಮಾಡಲಾಗಿರುತ್ತದೆ.</td></tr>
<tr><td>18</td><td>ಬಳ್ಳಾರಿ</td><td>ಸಾಧನಾ ಸಮಾವೇಶಕ್ಕೆ ಬಳ್ಳಾರಿ ಜಿಲ್ಲೆಗೆ ರೂ. 142.00 ಲಕ್ಷಗಳು ಅವಶ್ಯಕವಾಗಿರುತ್ತದೆ.</td></tr>
<tr><td>19</td><td>ಬೀದರ್</td><td>• ಬೀದರ ಜಿಲ್ಲೆಯಿಂದ ದಿನಾಂಕ: 20-05-2025 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ಆಯೋಜಿಸಿದ್ದ ವಿವಿಧ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ಕುರಿತು ಸಮರ್ಪಣಾ ಸಂಕಲ್ಪ-2025 ಸಮಾವೇಶಕ್ಕೆ ಫಲಾನುಭವಿಗಳನ್ನು ಕರೆದುಕೊಂಡು ಹೋಗಲು ರೂ.1,31,484/- ಖರ್ಚು ಮಾಡಲಾಗಿದೆ.<br>• ಗ್ಯಾರಂಟಿ ಯೋಜನೆ ಸಮಾವೇಶಕ್ಕೆ ರೂ.2,53,11,153/- ಗಳ ವೆಚ್ಚವಾಗಿರುತ್ತದೆ.<br>• ಬೀದರ ಜಿಲ್ಲೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಯ ಸಮಾವೇಶವನ್ನು ಏರ್ಪಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ ರವರಿಗೆ ಅನುಮತಿಯನ್ನು ನೀಡಲಾಗಿದೆ.</td></tr>
<tr><td>20</td><td>ಕೊಪ್ಪಳ</td><td>ವಿಜಯನಗರ ಜಿಲ್ಲೆಯಲ್ಲಿ ದಿನಾಂಕ: 20.05.2025 ರಂದು ನಡೆದ ಸಮರ್ಪಣೆ ಸಂಕಲ್ಪ ಸಮಾವೇಶಕ್ಕೆ ಸರ್ಕಾರದಿಂದ ಕೊಪ್ಪಳ ಜಿಲ್ಲೆಗೆ ಒಟ್ಟು <u>ರೂ.60,66,800/-</u> ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಸಂಪೂರ್ಣ ಅನುದಾನವನ್ನು ವೆಚ್ಚ ಮಾಡಲಾಗಿರುತ್ತದೆ.</td></tr>
<tr><td>21</td><td>ರಾಯಚೂರು</td><td>• ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಆದೇಶ : STW/SECB/STP/271/2025 ಬೆಂಗಳೂರು, ದಿ:05.07.2025 ರನ್ವಯ ರೂ.1.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ (ಆಡಳಿತ ಕನ್ನಡ) ಸರ್ಕಾರದ ಆದೇಶ ಸಂಖ್ಯೆ ಕ.ಸಂ:ವಾ115ಕೆಓಎಲ್ ಆಕ/2024 ಬೆಂಗಳೂರು ದಿನಾಂಕ:1.10.2024 ರನ್ವಯ ರೂ.50.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನವನ್ನು ಖರ್ಚು-ವೆಚ್ಚ ಮಾಡಲಾಗಿರುತ್ತದೆ.<br>• ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ) ಇವರ ಅಧಿಸೂಚನ ಸಂಖ್ಯೆ : ಆಇ 479 ವೆಚ್ಚ 12/2025 ದಿನಾಂಕ:17.05.2025 ಹಾಗೂ, ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ) ಇವರ ಅಧಿಸೂಚನೆ ಸಂಖ್ಯೆ ಆಇ 477 ವೆಚ್ಚ 12/2025ದಿ: 17.05.2025 ರ ಸರ್ಕಾರದ ಅಧಿಸೂಚನೆಯನ್ವಯ ಕರ್ನಾಟಕ ಸಂಗ್ರಹಣೆಗಳ ಪಾರದರ್ಶಕ ಅಧಿನಿಯಮ ಸಾರ್ವಜನಿಕ 1999ರ ಕಲಂ 4(ಜಿ) ರಡಿ ಅನುಮತಿ ಪಡೆಯಲಾಗಿದೆ.</td></tr>
</table>

| | | |
|---|---|---|
| 22 | **ವಿಜಯನಗರ** | ಗ್ಯಾರಂಟಿ ಸಮಾವೇಶಗಳಿಗೆ ರೂ.2,74,555/- ಗಳ ವೆಚ್ಚವಾಗಿರುತ್ತದೆ.<br>ವಿಜಯನಗರ ಜಿಲ್ಲೆಯಲ್ಲಿ 20.05.2025 ರಂದು ನಡೆದ ಸಮರ್ಪಣೆ ಸಂಕಲ್ಪ ಸಮಾವೇಶಕ್ಕೆ ಸರ್ಕಾರದಿಂದ ಒಟ್ಟು ರೂ.7.00 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ಒಟ್ಟು ರೂ.6,97,96,805/-ಮೊತ್ತವನ್ನು ವೆಚ್ಚ ಮಾಡಲಾಗಿರುತ್ತದೆ.<br><br>ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ) ಇವರ ಅಧಿಸೂಚನೆ ಸಂಖ್ಯೆ : ಆಇ 479 ವೆಚ್ಚ 12/2025 ದಿನಾಂಕ: 17.05.2025 ಮತ್ತು ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ) ಇವರ ಅಧಿಸೂಚನೆ ಸಂಖ್ಯೆ : ಆಇ 477 ವೆಚ್ಚ 12/2025 ದಿನಾಂಕ : 17.05.2025 ಅಧಿಸೂಚನೆಯನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕ ಅಧಿನಿಯಮ 1999 ರ ಕಲಂ 4(ಜಿ) ರಡಿ ಅನುಮತಿ ಪಡೆಯಲಾಗಿದೆ. |
| 23 | **ಬೆಳಗಾವಿ** | ಬೆಳಗಾವಿ ಜಿಲ್ಲೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶ ಕುರಿತು 2023 ಮೇ ತಿಂಗಳಿಂದ ಜುಲೈ 2025 ವರೆಗೆ ಒಟ್ಟು ರೂ.1,40,43,311/- ಗಳನ್ನು ಖರ್ಚು ಮಾಡಲಾಗಿದೆ. ಈ ಪೈಕಿ ರೂ 85,52,230/- ಗಳನ್ನು ಮಾನ್ಯ ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ/34/ಸಿಸಿಆರ್ ವಿ/2023 (ಇ-1184254) ಬೆಂಗಳೂರು, ದಿನಾಂಕ:04-03-2024 ನೇದ್ವರ ಪ್ರಕಾರ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಿಂದ ಅನುದಾನವನ್ನು ಬಳಸಿಕೊಳ್ಳಲಾಗಿದೆ. |
| 24 | **ಬಾಗಲಕೋಟೆ** | ಗ್ಯಾರಂಟಿ ಯೋಜನೆ ಸಮಾವೇಶಕ್ಕೆ ರೂ.1,99,58,000/- ಗಳ ವೆಚ್ಚವಾಗಿರುತ್ತದೆ. |
| 25 | **ವಿಜಯಪುರ** | • ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ನಡೆದ ಸಾಧನಾ ಸಮಾವೇಶಕ್ಕೆ ರೂ.16,00,000/- ಗಳ ಲಕ್ಷ ವೆಚ್ಚವಾಗಿರುತ್ತದೆ.<br>• ಗ್ಯಾರಂಟಿ ಯೋಜನೆಗಳ ಸಮಾವೇಶಕ್ಕೆ ರೂ.80,00,000/- ಗಳ ವೆಚ್ಚವಾಗಿರುತ್ತದೆ. |
| 26 | **ಧಾರವಾಡ** | ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ ಸಮಾವೇಶಕ್ಕಾಗಿ 2.53 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿರುವಂತೆ ವೆಚ್ಚವಾಗಿರುತ್ತದೆ.<br>ಸರ್ಕಾದ ಆದೇಶ ಸಂ: ಸಿಆಸುಇ ಆಸು 03 ಇಸಪ 2024, ದಿ: 23.01.2024 ನೇದ್ದ ರನ್ವಯ ಸಮಾವೇಶಗಳನ್ನು ಏರ್ಪಡಿಸಲಾಗಿದೆ ಹಾಗೂ ಕೆ.ಟಿ.ಪಿ ಕಾಯ್ದೆ – 1999 ನೇದ್ದರನ್ವಯ ಖರ್ಚುವೆಚ್ಚಗಳನ್ನು ಮಾಡಲಾಗಿದೆ. |
| 27 | **ಗದಗ** | ಗ್ಯಾರಂಟಿ ಯೋಜನೆಯ ಸಮಾವೇಶಕ್ಕೆ ರೂ.1,29,90,000/- ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುವಂತೆ, ವೆಚ್ಚ ಮಾಡಲಾಗಿರುತ್ತದೆ. |
| 28 | **ಹಾವೇರಿ** | ಜಿಲ್ಲೆ/ತಾಲೂಕು/ ಹೋಬಳಿ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶಕ್ಕೆ ಜಿಲ್ಲೆಗೆ ಒಟ್ಟು ರೂ.71,08,920-00 ಗಳ ಅನುದಾನ ಬಿಡುಗಡೆ ಮಾಡಲಾಗಿದ್ದು ಸದರಿ ಸಮಾವೇಶಗಳನ್ನು ಜಿಲ್ಲಾ ನಿರ್ಮಿತಿ ಕೇಂದ್ರ ಹಾವೇರಿ ಇವರಿಂದ ನಡೆಸಲಾಗಿದೆ. |
| 29 | **ಉತ್ತರ ಕನ್ನಡ** | ಸದರಿ ಗ್ಯಾರಂಟಿ ಯೋಜನೆ ಸಮಾವೇಶಕ್ಕೆ ರೂ.99,96,382/- ಗಳ ಅನುದಾನ ಖರ್ಚು ಮಾಡಲಾಗಿದ್ದು ಸದರಿ ಗ್ಯಾರಂಟಿ ಯೋಜನೆ ಸಮಾವೇಶವನ್ನು ನಡೆಸಲು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ರವರಿಗೆ ಟೆಂಡರ್ ನೀಡಲಾಗಿರುತ್ತದೆ. |

*****